ಕೇಳಿದ್ದಾರೆ. ಈಗಾಗಲೇ 50% ಸಬ್ಸಿಡಿ ಹಣವನ್ನು ಕೊಡುತ್ತಿದ್ದೇವೆ. ಅವರ ಜೀವನೋಪಾಯಕ್ಕೋಸ್ಕರ 15 ಸಾವಿರ ರೂ. ಗಳನ್ನು ತಾಲ್ಲೂಕುಗಳ ಬರಗಾಲ ಪರಿಸ್ಥಿತಿಯನ್ನು ನೋಡಿ, ಆ ತಾಲ್ಲೂಕುಗಳಿಗೆ, ಅದರಲ್ಲೂ ವಿಶೇಷವಾಗಿ ಬಿಜಾಪುರ ಜಿಲ್ಲೆಗೆ ಹೆಚ್ಚಿನ ಅನುದಾನವನ್ನು ಕೊಡುವ ಪ್ರಯತ್ನವನ್ನು ಮಾಡುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಲಿಚ್ಛಿಸುತ್ತೇನೆ.

ರಸ್ತೆಗಳ ದುರಸ್ತಿ

60(457) ಶ್ರೀಮತಿ ಕಲ್ಪನಾ ಸಿದ್ಧರಾಜು (ಮದ್ದೂರು):–ಮಾನ್ಯ ಲೋಕೋಪಯೋಗಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮದ್ದೂರು ತಾಲ್ಲೂಕು ವ್ಯಾಪ್ತಿಯ ಎಂ.ಜಿ.ಎಂ. ರಸ್ತೆಯ ಭಾರತಿನಗರ ಹಲಗೂರು ವೃತ್ತದಿಂದ ಅಣ್ಣೂರು ಗೇಟ್‌ವರೆಗೆ ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ರಸ್ತೆಯನ್ನು ದುರಸ್ತಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

ಇ) ಹಾಗಿದ್ದಲ್ಲಿ, ಯಾವಾಗ ರಸ್ತೆಯನ್ನು ದುರಸ್ತಿಗೊಳಿಸಲಾಗುವುದು ;

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):–

ಅ) ಮಂಡ್ಯ – ಗುತ್ತಲು–ಮುತ್ತತ್ತಿ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಇದರ ಒಟ್ಟು ಉದ್ದ 63.00 ಕಿ.ಮೀ. ಇರುತ್ತದೆ. ಭಾರತೀನಗರ – ಹಲಗೂರು ವೃತ್ತದಿಂದ ಅಣ್ಣೂರು ಗೇಟ್ ವರೆಗಿನ ರಸ್ತೆಯು ಮದ್ದೂರು ತಾಲ್ಲೂಕಿನ ಮಂಡ್ಯ ಗುತ್ತಲು ಮುತ್ತತ್ತಿ ರಸ್ತೆಯ ಒಂದು ಭಾಗವಾಗಿರುತ್ತದೆ. ಈ ರಸ್ತೆಯ ಸರಪಳಿ 17.00 ಕಿ.ಮೀ. ನಿಂದ 17.90 ಕಿ.ಮೀ. ವರೆಗೆ 900.00 ಮೀಟರ್ ಇರುತ್ತದೆ. ಸದರಿ ಸರಪಳಿಯ ರಸ್ತೆಯು ಭಾರತೀನಗರದ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ಮುಂಭಾಗ ಹಾದು ಹೋಗುವುದರಿಂದ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವ ಎತ್ತಿನಗಾಡಿ, ಲಾರಿಗಳು, ರಸ್ತೆಯಲ್ಲಿ ನಿಲ್ಲುವುದರಿಂದ ಕಬ್ಬಿನ ಕಸ ಮತ್ತು ದನ–ಕರುಗಳ ಕಸ ಸೇರಿ ರಸ್ತೆಯು ತುಂಬಾ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಸರಪಳಿ 17.00 ನಿಂದ 17.90 ಕಿ.ಮೀ. ವರೆಗೆ ಕಾಂಕ್ರೀಟ್ ರಸ್ತೆ

ನಿರ್ಮಾಣ ಮಾಡಲು ರೂ. 175.00 ಲಕ್ಷಗಳಿಗೆ 2011–12 ನೇ ಸಾಲಿನ ಅಪೆಂಡಿಕ್ಸ್–ಇ ನಲ್ಲಿ ಸೇರ್ಪಡೆಗೊಳಿಸಲು ಪರಿಶೀಲಿಸಲಾಗುತ್ತಿದ್ದು ಅನುದಾನದ ಲಭ್ಯತೆಯನ್ನಾಧರಿಸಿ ಕಾಮಗಾರಿ ಕೈಗೊಳ್ಳಲಾಗುವುದು.

ಇ) ಮುಂಗಾರೋತ್ತರ ಅವಧಿಯಲ್ಲಿ ರಸ್ತೆಯಲ್ಲಿನ ಗುಂಡಿ ಮುಚ್ಚಿ ಸುಸ್ಥಿತಿಯಲ್ಲಿಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀಮತಿ ಕಲ್ಪನಾ ಸಿದ್ಧರಾಜು:– ಮಾನ್ಯ ಉಪಾಧ್ಯಕ್ಷರೆ, ಮಂಡ್ಯ – ಗುತ್ತಲು–ಮುತ್ತತ್ತಿ ರಸ್ತೆ ತುಂಬಾ ಹಾಳಾಗಿದ್ದು, ಇದರಿಂದ ಜನಸಾಮಾನ್ಯರು ರಸ್ತೆಯಲ್ಲಿ ಓಡಾಡುವುದಕ್ಕೆ ಆಗುತ್ತಿಲ್ಲ. ಈ ಕಡೆಗಳಲ್ಲಿ ವರ್ತಕರು ಇರುವುದರಿಂದ ವ್ಯಾಪಾರಕ್ಕೆ ತೊಂದರೆ ಇದೆ. ಇಲ್ಲಿ ವಿಪರೀತ ಧೂಳು ಇದೆ, ಮತ್ತೆ ಫ್ಯಾಕ್ಟರಿಯಿಂದ ಕಬ್ಬನ್ನು ಸಾಗಾಣಿಕೆ ಮಾಡಬೇಕೆಂದರೆ ಲಾರಿಗಳು ಅದೇ ರಸ್ತೆಗಳಲ್ಲಿ ಓಡಾಡುವುದರಿಂದ ಇಲ್ಲಿ ರಸ್ತೆಗಳು ತುಂಬಾ ಹಾಳಾಗಿದೆ.

ಮಾನ್ಯ ಸಚಿವರು ಕೂಡ 16.4.2011 ರಂದು ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ನೋಡಿದ್ದಾರೆ. ಅದಷ್ಟು ಬೇಗ ಕಾಮಗಾರಿಗಳನ್ನು ಕೈಗೊಳ್ಳಬೇಕು. ಈ ರಸ್ತೆಯ ತುಂಬಾ ಧೂಳಿನಿಂದ ಕೂಡಿದೆ. ರಸ್ತೆಯ ಎರಡೂ ಕಡೆಗಳಲ್ಲಿ ಇರುವ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಈ ರೀತಿ ಒತ್ತುವರಿ ಮಾಡಿಕೊಂಡಿರುವ ಜಾಗವನ್ನೂ ಬಿಡಿಸಿ ಕೊಡಬೇಕು. ಈ ರಸ್ತೆ ಮಳವಳ್ಳಿಗೂ ಸಹ ಹಾದುಹೋಗಿದೆ. ಇಲ್ಲಿ ರೈತರು ರಸ್ತೆ ಮೇಲೆ ನಾಟಿ ಹಾಕಿ ಪ್ರತಿಭಟನೆ ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೂ ಬಂದಿದೆ. ಆದಷ್ಟು ಬೇಗ ಈ ರಸ್ತೆಯ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ: ಸನ್ಮಾನ್ಯ ಉಪಾಧ್ಯಕ್ಷರೆ, ಸಹೋದರಿ ಕಲ್ಪನಾ ಸಿದ್ದರಾಜುರವರು ಎತ್ತಿರುವ ಪ್ರಶ್ನೆಯಲ್ಲಿ ಪ್ರಸ್ತಾಪಿಸಿರುವ ರಸ್ತೆ ನನ್ನ ಕ್ಷೇತ್ರದಲ್ಲೂ ಹಾದು ಹೋಗುವಂತಹ ಪ್ರಮುಖ ರಸ್ತೆ ಆಗಿದ್ದು, ಆ ಭಾಗದಲ್ಲಿ ರೈತರು ಹಲವಾರು ಬಾರಿ ರಸ್ತೆಯಲ್ಲಿ ನಾಟಿ ಹಾಕಿ ಪ್ರತಿಭಟನೆ ಮಾಡಿದ್ದಾರೆ. ಇದು ಬಹಳ ವರ್ಷಗಳಿಂದ 'ಕತ್ತೆ ಮಾರ್ಗ' ಎಂದು ಹೆಸರು ವಾಸಿಯಾದಂತಹ ರಸ್ತೆ. ಅದನ್ನು 'ಕುದುರೆ ಮಾರ್ಗ' ಮಾಡಿಕೊಡಿ ಎಂದು ನಾವು ಪದೇ ಪದೇ ಬೇಡಿಕೆ ಇಡುತ್ತಿದ್ದೇವೆ. ಅಲ್ಲಿ ಚಾಮುಂಡೇಶ್ವರಿ ಷುಗರ್

ಫ್ಯಾಕ್ಟರಿ ಇದೆ. ಆ ರಸ್ತೆಯಲ್ಲೇನಾದರೂ ರೈತರು ಎತ್ತಿನ ಗಾಡಿ ಹೊಡೆದುಕೊಂಡು ಹೋಗುವುದಕ್ಕೆ ಸಾಧ್ಯವಿದೆ ಎನ್ನುವುದದಾದರೆ ನಾನು ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವುದಕ್ಕೆ ತಯಾರಿದ್ದೇನೆ. ಆ ರಸ್ತೆ ಅಷ್ಟೊಂದು ಅಧ್ವಾನವಾಗಿದೆ. ಬಡವರು ಅಥವಾ ರೈತರೆಂದರೆ ಕನಿಷ್ಠ ಧೋರಣೆ ಬೇಡ. ಇದು ಶೀಘ್ರವಾಗಿ ಕಾಮಗಾರಿ ಕೈಗೊಳ್ಳಬೇಕಾದಂತಹ ಹಾಗೂ ಅಭಿವೃದ್ಧಿಪಡಿಸಬೇಕದಂತಹ ರಸ್ತೆ ಆಗಿದೆ. ಈ ರಸ್ತೆ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಂಡು, ನಮ್ಮ ಭಾಗದ ರೈತರ ಬವಣೆಯನ್ನು ನೀಗಿಸುವುದಕ್ಕೆ ದಯಮಾಡಿ ಸಚಿವರಿಗೆ ತಾವು ತಮ್ಮ ಪೀಠದಿಂದ ಒಂದು ಆದೇಶವನ್ನು ನೀಡಬೇಕೆಂದು ತಮ್ಮಲ್ಲಿ ಬೇಡಿಕೊಳುತ್ತೇನೆ.

ಶ್ರೀ ಸಿ.ಎಂ. ಉದಾಸಿ:– ಮನ್ಯ ಸದಸ್ಯರು ಹೇಳಿರುವಂತಹ ರಸ್ತೆ ಭಾರತಿನಗರದ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ಮುಂಭಾಗದಲ್ಲಿ ಹಾದು ಹೋಗುವಂತಹದ್ದು. ಆ ರಸ್ತೆಯ ಎರಡೂ ಕಡೆಗಳಲ್ಲಿ ಅತಿಕ್ರಮಣ ಆಗಿದೆ ಎನ್ನುವುದನ್ನು ನಾನೇ ಸ್ವತಃ ಪರಿಶೀಲಿಸಿದ್ದೇನೆ. ಈ ಬಗ್ಗೆ ಸಕ್ಕರೆ ಕಾರ್ಖಾನೆಯ ಮಾಲೀಕರ ಜೊತೆ ಚರ್ಚೆ ಮಾಡಿದಾಗ, ಕಾರ್ಖಾನೆ ಮಾಲೀಕರು ಸಹ ನನಗೆ ಸಹಕಾರ ನೀಡುತ್ತೇನೆ ಎನ್ನವ ಭರವಸೆಯನ್ನು ಕೊಟ್ಟಿದ್ದರು. ಆದರೆ ಅವರು ನನ್ನನ್ನು ಭೇಟಿಯಾದಾಗ ಅದನ್ನು ನಿರಾಕರಣೆ ಮಾಡಿ ಹೋಗಿದ್ದಾರೆ. 900 ಮೀಟರ್ ರಸ್ತೆಯನ್ನು ಸಿಮೆಂಟ್ ಕಾಂಕ್ರೀಟ್ ರಸ್ತೆ ಮಾಡುವ ಅವಶ್ಯಕತೆ ಇದೆ. ಮತ್ತು ಒತ್ತುವರಿಯನ್ನು ತೆಗೆಯಬೇಕಾದಂತಹ ಅವಶ್ಯಕತೆ ಇದೆ.' ಇದು ಪ್ರಮುಖವಾದ ರಸ್ತೆಯಾಗಿರುವುದರಿಂದ, ಅಲ್ಲಿರುವ 900 ಮೀಟರ್ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಮಾಡಿಕೊಡಿಸುತ್ತೇನೆಂದು ಇಲ್ಲಿ ಭರವಸೆ ಕೊಡುತ್ತೇನೆ.

ಸಕ್ಕರೆ ಕಾರ್ಖಾನೆಗಳ ಮಂಜೂರಾತಿ

55(571) ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ) (ದೇವರ ಹಿಪ್ಪರಗಿ) ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬಿಜಾಪುರ ಜಿಲ್ಲೆಯಲ್ಲಿ ಪ್ರಸ್ತುತ ಎಷ್ಟು ಸಕ್ಕರೆ ಕಾರ್ಖಾನೆಗಳಿವೆ, ಅವು ಎಲ್ಲಿವೆ ಮತ್ತು ಇವರಲ್ಲಿ ಸಹಕಾರಿ/ಖಾಸಗಿ ಕಾರ್ಖಾನೆಗಳೆಷ್ಟು?

(ಆ) ಹೊಸದಾಗಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಹಾಗೂ ಪ್ರಾರಂಭದಿಂದ ಕಾರ್ಖಾನೆ ಕಾರ್ಯಾರಂಭ ಮಾಡುವವರೆಗೂ ನೀಡಿರುವ ಮಾನದಂಡಗಳೇನು?